ರ್ರಿಂದ ಬದಸ್ತೂರ್ ಮೊಫೀ ಪ್ಯಾಸನ್ನ ಪಡೆಯತಕ್ಕದ್ದು. ರೂಲ್ಸ್ 18ರ ಲಾಗಾಯತು 5ರ ವರಿವಿಗೂ ಕೀರಿ ಮೇಲಿನ ನಿಬಂಧನೆಗಳು ಈ ನಾಟೂಗಳ ವ ಚೌಬೀನೆಗಳನ್ನ ಸಾಗಿಸುವ ಸಂಗತಿಗೂ ಸಹ ಲಗಾವಾಗಿರತಕ್ಕವು.

8. ಯಾವ ಕಾಫೀ ಜಮ್ರ್ಮಾ ಹಿಡುವಳೀದಾರನಾಗಲಿ, ಯಾ ಇತರ ಮನುಷ್ಯನಾಗ, ಈ ನಿಬಂಧನೆಗಳಿಗೆ ತಪ್ಪಿನಡೆದಲ್ಲಿ ಫಾರೆಸ್ಟ್ ನಿಬಂಧನೆಗಳ 40ನೇ ಸೆಕ್ಷರ್ ಅನುಸರಿಸಿ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗುವನು.

ಪ್ಯಾಸಿನ ನಂಬರು ಮತ್ತು ತಾರೀಖು.	ಯಾರಿಗೆ ಕೊಡಲ್ಪಟ್ಟಿತೋ ಅವರ ಹೆಸರು.	ಕಾಫೀ ತೋಟದ ಹೆಸರು.	ನಾಟೂ ಇ ಚೌಬೀನೆಯ ಜಾತಿಸೇ.	ತೀರ್ವು.	ಯಲ್ಲಿಗೆ ಸಾಗಿಸಲ್ಪಡಬೇಕಾದ ಸ್ಥಳ.	ಸಾಗಿಸಲ್ಪಡಬೇಕಾದ ದಿವಸ.	ಪ್ಯಾಸ್ ಯಾವ ತಾರೀಖಿನಲ್ಲಿ ಮುಗಿಯತಕ್ಕದ್ದು.	ಯಾವ ತಾರೀಖಿನಲ್ಲಿ ನಾಪಸ್ಸು ಆಯಿತು.

ಪ್ಯಾಸ್‌ಕೋಟ್ಟ ಆಫೀಸರ ರುಜೂ ವ ಹುದ್ದೆ.

ತಾರೀಖು 14ನೇ ಡಿಸಂಬರ್ 1887.

ನಂ. 156.—ಕಾಫೀ ಜಮ್ರ್ಮಾಗಳಲ್ಲಿರುವ ಮನ್ನಾಜಾತೀ ಮರಗಳನ್ನ, ಮಾಲೀಕರು ಪ್ರಮಾಣಿಕವಾಗಿ ಸ್ವಂತ ಉಪಯೋಗಕ್ಕಲ್ಲದೇ ಇತರ ಉದ್ದೇಶಕ್ಕಾಗಿ, ಕಡಿದುಕೊಳ್ಳಲಿಕ್ಕೆ ತೆರಬೇಕಾದ ತೀರ್ವೆಗಳನ್ನ ನಿರ್ಪಡಿಸತಕ್ಕ ಬಗ್ಗೆ, ಕಳೆದ ಯೀಪ್ರಿಲ್ 2ನೇ ಮರ್ಕುಂ ಕ್ಯಾಂಪ: 8ನೇ ನಂಬರುಳ್ಳ ಇಸ್ತಿಹಾರನ್ನನುಸರಿಸಿ ಅಂಥಾ ನಾಟೂಗಳನ್ನ ಸಾಗಿಸುವ ಬಗ್ಗೆ ಸಂಬಂಧಪಟ್ಟಂತೂ ಈ ಕೆಳಗೆ ಬರುವ ನಿಬಂಧನೆಗಳನ್ನ ಶ್ರೀಮನ್ಮಹಾರಾಜಾ ಸರಕಾರದವರು ಮಂಜೂರ್ಮಾಡಿರುತ್ತಾರೆ.

1. ಕಾಫೀ ಜಮ್ರ್ಮಾನಿನ ಹಿಡುವಳೀದಾರನು ತನ್ನ ಜಮ್ರ್ಮಾನಿನಲ್ಲಿರತಕ್ಕ ವುಳಿಸಿಕೊಳ್ಳಲ್ಪಟ್ಟ ನಾಟೂಗಳನ್ನ, ಪ್ರಮಾಣಿಕವಾಗಿ ತನ್ನ ಸ್ವಂತ ವುಪಯೋಗಕ್ಕಲ್ಲದೇ ಯಿತರ ವುದ್ದೇಶಕ್ಕಾಗಿ, ಕಡಿದುಕೊಳ್ಳಲು ಅಪೇಕ್ಷಿಸಿದಲ್ಲಿ, ಅದಕ್ಕಾಗಿ ವೊಕರರಾಗಿರುವ ಯಿದರಡೀ ಕಂಡ ತೀರ್ವೆಯನ್ನ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡಿ, ಟ್ರೇಜರೀ ಆಫೀಸರಿಂದ ರಸೀದಿಯನ್ನ ಪಡೆಯತಕ್ಕದ್ದು.

ಕಡಿಯತಕ್ಕ ಮರ 1ಕ್ಕೆ ತಿರ್ವೆ.

	ರೂಪಾಯಿ.		ರೂಪಾಯಿ.
ತೇಗ ..	.. 8	ಹೊನ್ನೇ ..	.. 3
ಪೂ ..	.. 6	ಜಾಲಾರೀ ..	.. 3
ಬೀಟೇ (ಕರೇ ಮರ) ..	.. ೮	ನಂದೀ ..	.. 3

2. ಆ ಮೇಲೆ, ಕಾಫೀ ಜಮ್ರ್ಮಾ ಹಿಡುವಳೀದಾರನು ನಾಟೂವನ್ನ ಕಡಿದು ಸಾಗಿಸಲಿಕ್ಕೆ ಚಿಪ್ಪಠೇ ಪಡೆಯಲು, ಮೇಲೆ ಹೇಳಲ್ಪಟ್ಟ ರೇದೀನಿಸೀ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರಿಗೆ ಅಪ್ಲಿಕೇರ್ಷ ಕಳುಹಿಸತಕ್ಕದ್ದು. ಆ ಅಪ್ಲಿಕೇಷನಿನಲ್ಲಿ ಮರಗಳ ಜಾತಿ, ಸಂಖ್ಯೆ ವ ಅವುಗಳು ಯಿರತಕ್ಕ ಜಾಗಾ ಇವುಗಳನ್ನ ನಮೂದಿಸಬೇಕು.

3. ಅಂಥಾ ಅಪ್ಲಿಕೇರ್ಷ ಬಂದ ತರುವಾಯ, ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರರು, ನಾಟೂವನ್ನ ಕಡಿದು ಸಾಗಿಸಲಿಕ್ಕೆ ಯಿದರಡೀ ಕಂಡ ನಮೂನೆಯಲ್ಲಿ ಬಂದು ಲೈಸೆನ್ಸನ್ನ ಕೊಡತಕ್ಕದ್ದು. ಈ ಲೈಸೆನ್ಸಿನ ಪ್ರಕಾರ ಕಾಫೀಜಮ್ರ್ಮಾನಿನಲ್ಲಿ ಕಡಿದು ಸಾಗಿಸಲ್ಪಡುವ

1013

ತಮ್ಮಾಂ ನಾಟಾ ಯಂದಿಗೂ ಸದರೀ ಲೈಸೆನ್ಸು ಹಾಜರಿರತಕ್ಕದ್ದು. ಹಾಗೆ ಕಡಿಯಲ್ಪಟ್ಟ ನಾಟಾಗಳು ದಫೇವಾರಾಗಿ ಸಾಗಿಸಲ್ಪಟ್ಟರೆ, ಪ್ರತಿ ದಫೆಯ ನಾಟಾಗಳಿಂದಿಗೂ ಸದರೀ ಲೈಸೆನ್ಸು ಯಿರತಕ್ಕದ್ದು, ಹಾಗೆ ಪ್ರತಿ ದಫೆ ಸಾಗಿಸಲ್ಪಟ್ಟ ನಾಟಾಗಳ ತೇದಾದು ಯಿಷ್ಟು ಭಂಡಿ ಜೋಜೆಯಂದು, ಕಾಫೀಜಮ್ರ್ಮಾ ಹಿಡುವಳೀದಾರನು ಆ ಲೈಸೆನ್ಸಿನ ಹಿಂಭಾಗದಲ್ಲಿ ಷರಾ ನಮೂದಿಸಕ್ಕದ್ದು. ನಾಟಾ ರಫ್ತಾಗುತ್ತಿರುವಾಗ ಸದರೀ ಲೈಸೆನ್ಸು ಗವರ್ನ್‌ಮೆಂಟ್ ಫಾರೆಸ್ಟ್ರು ಪೊಲೀಸ್, ವ ರೆವಿನ್ಯೂ ಆಫೀಸರುಗಳ ತನಿಖೀಗೆ ಒಳಪಟ್ಟಿರತಕ್ಕದ್ದು, ಕಾಫೀ ಜಮ್ರ್ಮಾ ಹಿಡುವಳೀದಾರನು ತನ್ನ ಮರಗಳನ್ನ ಬೇರೆಬೇರೆ ಜನಗಳಿಗೆ ಕೊಡಲು ಇಚ್ಛೈಸಿದಲ್ಲಿ ಬೇರೆಬೇರೆ ಲೈಸೆನ್ಸುಗಳನ್ನ ಪಡೆಯತಕ್ಕದ್ದು.

4. ಲೈಸೆನ್ಸ್‌ದಾರನಾಗಲಿ, ಲೈಸೆನ್ಸ್‌ದಾರನಿಂದ ನಾಟಾವನ್ನ ಖರೀದಿಗೆ ಪಡೆಯುವ ಮನುಷ್ಯನಾಗಲಿ, ಲೈಸೆನ್ಸ್‌ನಲ್ಲಿ ಕಂಡ ವಾಯಿದೆಯೊಳಗಾಗಿ, ಅದನ್ನ ಕೊಟ್ಟಂಥಾ ಆಫೀಸರಿಗೇನೇ ಲೈಸೆನ್ಸು ವಾಪಸ್ ಮಾಡಲಿಕ್ಕೆ ಬದ್ಧನಾಗಿರತಕ್ಕದ್ದು.

5. ಯಾವ ತೋಟದಲ್ಲಿ ನಾಟಾ ಕಡಿಯಲ್ಪಡುತ್ತೋ ಆ ತೋಟದಿಂದ ಹೊರಗೆ ಸಾಗಿಸಲ್ಪಡಬೇಕಾದ ತಮ್ಮಾಂ ನಾಟಾಗಳಿಗೂ, ಕಾಫೀ ಜಮ್ರ್ಮಾ ಹಿಡುವಳೀದಾರನ ಸ್ವಂತ ಸ್ಟ್ಯಾಂಪಿನಿಂದಾಗಲಿ, ಅಥವಾ ಆತನಿಂದ ಖರೀದಿಗೆ ಪಡೆದ ಮನುಷ್ಯನ ಸ್ವಂತ ಸ್ಟ್ಯಾಂಪಿನಿಂದಾಗಲಿ, ಗುರ್ತು ಮಾಡತಕ್ಕದ್ದು. ಅಂಥಾ ಸ್ಟ್ಯಾಂಪು ಫಾರೆಸ್ಟ್ರು ರೂಲ್ಸಿನ 39ನೇ ಸೆಕ್ಷನ್ ಪ್ರಕಾರ ರೆಜಿಸ್ಟರ್ ಮಾಡಲ್ಪಡತಕ್ಕದ್ದು.

6. ಕಾಫೀ ಜಮಿನಿನಲ್ಲಿರುವ ಉಳಿಸಿಕೊಳ್ಳಲ್ಪಟ್ಟ ನಾಟಾವನ್ನ ವಾಸ್ತವ್ಯವಾಗಿ ತನ್ನ ಸ್ವಂತ ಉಪಯೋಗಕ್ಕಲ್ಲದೆ ಬೇರೇ ಉದ್ದೇಶಕ್ಕಾಗಿ, ಈ ರೂಲ್ಸ್ ಅನುಸರಿಸಿ ಲೈಸೆನ್ಸ್ ಯಿಲ್ಲದೇ ಕಡಿದು ಸಾಗಿಸುವಂಥಾ ಅಥವಾ ಈ ರೂಲ್ಸ್‌ಗಳಿಗೆ ತಪ್ಪಿ ನಡಿಯುವಂಥಾ ಪ್ರತಿ ಮನುಷ್ಯನೂ ಫಾರೆಸ್ಟ್ರು ನಿಬಂಧನೆಗಳ 40ನೇ ಸೆಕ್ಷನ್ ಅನುಸರಿಸಿ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗುವನು.

ಕಾಫೀತೋಟದೊಳಗಿನ ನಾಟಾವನ್ನ ಕಡಿದು ತೋಟದೊಳಗೇನೇ ಸಾಗಿಸುವದಕ್ಕಾಗಲಿ ಅಥವಾ ತೋಟದಿಂದ ಹೊರಗೆ ಸಾಗಿಸುವದಕ್ಕಾಗಲಿ ಲೈಸೆನ್ಸಿನ ನಮೂನೆ.

ಲೈಸೆನ್ಸಿನ ನಂಬರ್ ಹಾಗೂ ತಾರೀಖು.	ಲೈಸೆನ್ಸ್‌ದಾರನ ಹೆಸರು.	ಕಾಫೀ ತೋಟದ ಹೆಸರು.	ಕಡಿಯಲ್ಪಟ್ಟ ನಾಟಾಗಳ ನಂಬರ್.	ಸಂಖ್ಯೆ.	ನಿಜಗ್ಯರತ್ತಾದ ಬೆಲೆ.	ಅಂದಾಜು ಬೆಲೆಯಲ್ಲಿ ಎಷ್ಟು ಸಾಗಿಸಲ್ಪಡಬೇಕು.	ಸಾಗಿಸಲ್ಪಡುವ ತಾರೀಖು.	ಯಾವ್ದಕ್ಕೆ ಸಾಗಿಸಲ್ಪಡುವದು ಮತ್ತು ಎಲ್ಲಿಗಾಗಿ ಸಾಗಿಸಲ್ಪಡಬೇಕು.	ಲೈಸೆನ್ಸ್ ನಾಮಾಸ್ ಹಾಗೂ ಹುದ್ದೆಕಾಡ ತಾರೀಖು.	ನಾಪತ್ತಾದ ತಾರೀಖು.

ತಾರೀಖು 10ನೇ ಡಿಸಂಬರ್ 1887.

ಮೈಸೂರು ಲೋಕಲ್ ಸರ್ವಿಸ್‌ಯಾನೇ ಸ್ಥಳಿಕ ನೌಕರಿ ವ ಪ್ಲೀಡರುಗಳ ವಿಷಯಕವಾದ ಪರೀಕ್ಷೆ.

ನಂ. 150.—ಮೈಸೂರು ದೇಶದ ಸ್ಥಳಿಕ ನೌಕರಿಯ ಸಿವಿಲ್, ಕ್ರಿಮಿನಲ್ ವ ರೆವಿನ್ಯೂ ಪರೀಕ್ಷೆಗೂ ಪ್ಲೀಡರುಗಳ ಪರೀಕ್ಷೆಗೂ ವಿಧಿಸಲ್ಪಟ್ಟ ಪ್ರತಿ ಪಾಠದ ಹೆಚ್ಚು ನಂಬರುಗಳು ಮತ್ತು ಪರೀಕ್ಷೆ ನಡಿಯುವ ಕಾಲ ತೋರಿಸುವ ಇದರಡೀ ಕಂಡ ತಖ್ತೆಯು, ಸರ್ವರ ತಿಳುವಳಿಕೇ ಬಗ್ಯೆ ಪ್ರಕಟಿಸಲ್ಪಡುತ್ತೆ. ಆಯಾ ಪರೀಕ್ಷೆಗಳು ಇದರಡೀ ಕಂಡಂತೆ ಅಕ್ಷರಗಳಿಂದ ತೋರಿಸಲ್ಪಟ್ಟಿದೆ.

ಸಿವಿಲ್ ಪರೀಕ್ಷೆ	A	ರೆವಿನ್ಯೂ ಪರೀಕ್ಷೆ	C
ಕ್ರಿಮಿನಲ್ ,,	B	ಪ್ಲೀಡರ್ ,,	D

ದಿನಗಳು.	ಕಾಲ.	ಪಾಠಗಳು.	ಪರೀಕ್ಷೆ.	ಹೆಚ್ಚು ನಂಬರ್.
ಮೊದಲ್‌ದಿವಸ.	11 ರಿಂದ 12	ಲ್ಯಾಂಡ್ ಅಕ್ವಿಜಿಷನ್ ಆಕ್ಟು ..	G.	50
	12 ರಿಂದ 1½	ರೆಜಿಸ್ಟ್ರೇಷನ್ ಆಕ್ಟು ..	G. D.	50
	2 ,, 4	ಕ್ಯಾಟಲ್ ಟ್ರೆಸ್‌ಪೆಸ್ ಆಕ್ಟು, ಯಕ್ಸ್‌ಸೈಸ್ ಆಕ್ಟು, ಅಫೀಂ ಆಕ್ಟು ..	G.	60
	4 ರಿಂದ 5	ಸ್ಟ್ಯಾಂಪ್ ಮತ್ತು ಕೋರ್ಟ್‌ಫೀಜ್ ಆಕ್ಟು ..	G. D.	40
ಎರಡನೇದಿವಸ.	11 ರಿಂದ 12	ಫಾರೆಸ್ಟ್ ರೂಲ್ಸು ..	G.	40
	12 ರಿಂದ 3	ರೆವಿನ್ಯೂ ಮತ್ತು ಸರ್ವೇ ಮ್ಯಾನ್ಯುಎಲ್‌ಗಳು ..	C.	150
	12 ರಿಂದ 2	ರೆವಿನ್ಯೂ ಮ್ಯಾನ್ಯುಎಲ್ .	D.	75
	3½ ,, 5½	ಸಿವಿಲ್ ಅಕೌಂಟ್ ಕೋಡು ಮತ್ತು ಫೈನಾನ್ಷಿಯಲ್ ಕೋಡು .	C.	60
ಮೂರನೇದಿವಸ.	11 ರಿಂದ 2	ಇಂಡಿಯನ್ ಪೆನಲ್‌ಕೋಡು .	B. D.	100
	2½ ,, 5½	ಕ್ರಿಮಿನಲ್ ಪ್ರೋಸೀಜ್ಯೂರ್ ಕೋಡು .	B. D.	100
ನಾಲ್ಕನೇದಿವಸ.	11 ರಿಂದ 1	ಟೂರಟಸ್ ಕಾನೂನು. .	A. D.	70
	1½ ,, 3½	ಸಾಕ್ಷ್ಯಸಂಗ್ರಹ .	A. B. D.	80
	4 ,, 5	ಪೊಲೀಸ್ ರೂಲ್ಸು .	B.	50
ಐದನೇ ದಿವಸ.	11 ರಿಂದ 1½	ಹಿಂದೂಲಾ ..	A. D.	100
	2 ,, 4½	ಮಹಮ್ಮದ್ದಲಾ ..	A. D.	70
ಆರನೇ ದಿವಸ.	11 ,, 1	ಸ್ಪೆಸಿಫಿಕ್ ರೆಲೀಫ್ ಆಕ್ಟು ..	A. D.	60
	2 ,, 5	ಸಿವಿಲ್ ಪ್ರೊಸಿಜ್ಯೂರ್ ಕೋಡ್ ..	A. D.	100
ಏಳನೇ ದಿವಸ.	10½ ,, 12½	ಲಾ ಆಫ್ ಮಾರ್ಗೇಜಸ್ ..	A. D.	60
	1 ,, 3	ಲಿಮಿಟೇಷನ್ ಆಕ್ಟು .	A. D.	60
	3½ ,, 5½	ಕಂಟ್ರಾಕ್ಟು ಆಕ್ಟು ..	A. D.	70
ಯಂಟನೇ ದಿವಸ.	11 ,, 1	ಪ್ಲೀಡಿಂಗ್‌ಯಾನೇ ವಾದ ನಡಿಸುವಣ ..	D..	60

ತಾರೀಖು 15ನೇ ಡಿಶಂಬರ್ 1887.

ನಂ. 157.—ಮೆ|| ಈ. ಸಿ. ಷಣ್ಮುಗವೇಲುಪಿಳ್ಳೆಯವರು ಬೆಂಗಳೂರು ಟರ್ನ್ ಮಾಜಿಸ್ಟ್ರೇಟ್ ಕೋರ್ಟಿನ ಚಾರ್ಜನ್ನು 1887ನೇ ಇಸವಿ ಡಿಶಂಬರ್ 8ನೇ ಮುಕ್ತುಮಿನ ಮಧ್ಯಾನ್ಹಾತ್ಪರ ಮೆ|| ಸೈಯ್ಯದ್ ನೌರುದ್ದೀನ್‌ರವರಿಗೆ ಒಪ್ಪಿಸಿ ಇರುತ್ತಾರೆ.

ಬಮೋಜೀಬ್ ಹುಕ್ಕುಂ.

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೆಟರಿ.